ಕಾರನ್ನು ಓಡಿಸುತ್ತಿದ್ದೆ. ಸ್ಪೀಡೋಮೀಟರ್ ಎಪ್ಪತ್ತು ತೋರಿಸುತ್ತಿತ್ತು. ಸ್ವಲ್ಪ ಮುಂದಕ್ಕೆ, ಯಾವನೋ ಒಬ್ಬ ಲಿಫ್ಟ್ ಕೇಳುತ್ತಾ ರಸ್ತೆಯ ಬದಿಗೆ ನಿಂತಿದ್ದ. ನಾನು ಬ್ರೇಕ್ ಹಾಕಿ ಅವನ ಬಳಿಯೇ ಕಾರು ನಿಲ್ಲಿಸಿದೆ. ಲಿಫ್ಟ್ ಕೇಳುವವರಿಗೆ ನಾನೆಂದೂ ನಿರಾಕರಿಸುತ್ತಿರಲಿಲ್ಲ, ಹಳ್ಳಿಯ ರಸ್ತೆಗಳಲ್ಲಿ ಲಿಫ್ಟ್ ಕೇಳಿಕೊಂಡು ನಿಲ್ಲುವುದೆಂದರೆ ಏನೆಂದು ಅನುಭವಿಸಿದವರಿಗೆ ಮಾತ್ರ ಗೊತ್ತು. ನೋಡಿಯೂ ನೋಡದವರಂತೆ ಮಿಂಚಿನಂತೆ ಮಾಯವಾಗುತ್ತಿದ್ದ ಆ ವಿಲಾಸಿ ಕಾರಿನವರನ್ನು ಈಗ ನೆನೆಸಿಕೊಂಡರೂ ಮುಷ್ಟಿ ಬಿಗಿಯಾಗುತ್ತದೆ. ಸಾಮಾನ್ಯವಾಗಿ ಸಣ್ಣ ಕಾರಿನವರು ಮಾತ್ರ ಲಿಫ್ಟ್ ಕೇಳುತ್ತಿದ್ದವರನ್ನು ಹತ್ತಿಸಿಕೊಳ್ಳುತ್ತಿದ್ದರು. ಅದರಲ್ಲಿಯೂ ಹೆಚ್ಚಾಗಿ ಹಳೇ ಕಾರಿನವರು. ಸಾಮಾನ್ಯವಾಗಿ ಆ ಕಾರುಗಳಲ್ಲಿ ಜನ ಕಿಕ್ಕಿರಿದು ತುಂಬಿರುತ್ತಿದ್ದರು. ಆದರೂ, ಕಾರಿನ ಒಡೆಯ, 'ಎಲ್ಲರೂ ಸ್ವಲ್ಪ ಸರಿದು ಕುಳಿತುಕೊಂಡರೆ ಇನ್ನೂ ಇಬ್ಬರನ್ನು ಹತ್ತಿಸಿಕೊಳ್ಳಬಹುದು...' ಎಂದು ಧಾರಾಳತನ ತೋರಿಸುತ್ತಿದ್ದ.

ಕಾರು ನಿಲ್ಲಿಸುತ್ತಿದ್ದಂತೆಯೇ ಲಿಫ್ಟ್ ಕೇಳಿದವನು ತಲೆಯನ್ನು ಒಳಗೆ ತೂರಿಸಿ,

'ಲಂಡನ್ ಕಡೆಗೆ ಹೊರಟಿದ್ದೀರಾ ಗುರುಗಳೇ?' ಎಂದ.

'ಹೌದು, ಬಾರಯ್ಯಾ ಒಳಗೆ' ಎಂದೆ.

ಅವನು ಕಾರನ್ನು ಹತ್ತಿದ. ಅವನು ಮೈಕಟ್ಟಿನಲ್ಲಿ ಪೀಚಲಾಗಿದ್ದು ನೋಡಲು ಒಂದು ಇಲಿಯಂತೆ ಕಾಣುತ್ತಿದ್ದ. ಕಣ್ಣುಗಳು ಮಾತ್ರ ಕಪ್ಪಗೆ ಚುರುಕಾಗಿ ಪಾದರಸದಂತೆ ಅತ್ತಿತ್ತ ಹರಿದಾಡುತ್ತಿದ್ದವು. ಬೂದಿಬಣ್ಣದ ಜಾಕೆಟ್ ತೊಟ್ಟಿದ್ದ. ತಲೆಯ ಮೇಲೊಂದು ಟೋಪಿ.

'ನಿನಗೆ ಲಂಡನಿನಲ್ಲಿ ಎಲ್ಲಿಗೆ ಹೋಗಬೇಕು?' ನಾನು ಕೇಳಿದೆ.

'ನನಗೆ ಲಂಡನ್ ದಾಟಿ ಹೋಗಬೇಕು, ಎಪ್ಸೋಮ್. ಇವತ್ತು ಕುದುರೆ ರೇಸ್ ಅಲ್ಲವೇ?'

'ಓಹ್, ಹೌದಲ್ವೇ? ನಿನ್ನೊಟ್ಟಿಗೆ ನನಗೂ ಹೊರಟುಬಿಡೋಣ ಅನ್ನಿಸುತ್ತೆ. ನನಗೂ ಕುದುರೆ ಜೂಜೆಂದರೆ ತುಂಬಾ ಇಷ್ಟ' ನಾನೆಂದೆ.

'ಕುದುರೆ ಬಾಲದ ಮೇಲೆ ನಾನೆಂದೂ ದುಡ್ಡು ಕಟ್ಟಿದವನಲ್ಲ. ಕಟ್ಟುವುದು ಬಿಡಿ. ನಾನದನ್ನು ನೋಡುವುದೂ ಇಲ್ಲ!'

'ಹಾಗಾದರೆ ನೀವು ಅಲ್ಲಿ ಕೆಲಸ ಮಾಡುತ್ತಿರಬೇಕು...'

'ಹತ್... ಅದು ಮತ್ತೂ ಬುರ್ನಾಸು ಕೆಲಸ.'

'ಹಾಗಾದ್ರೆ ನಿನಗೆ ಕುದುರೆ ರೇಸಿನ ಮೈದಾನದಲ್ಲಿ ಮತ್ತ್ಯಾವ ಕೆಲಸ?'

ಅವನಿಗೆ ನನ್ನ ಪ್ರಶ್ನೆ ಸರಿ ಕಾಣಿಸಿಲಿಲ್ಲವೇನೋ. ಅವನು ಮಾತನಾಡಲಿಲ್ಲ, ಸುಮ್ಮನಾದ. ಅವನ ಕಣ್ಣುಗಳು ರಸ್ತೆಯ ಮೇಲೆ ಅದೆಲ್ಲೋ ದೂರದಲ್ಲಿ ನೆಟ್ಟಿದ್ದವು. ನಾನೂ ಮತ್ತೆ ಕುತೂಹಲ ತೋರಿಸಲಿಲ್ಲ. ಅವನ ಹಾಗೆಯೇ ನನಗೂ ಲಿಫ್ಟ್ ಕೊಟ್ಟವರು ಹೀಗೆಯೇ ಅಸಂಬದ್ಧ ಪ್ರಶ್ನೆಗಳನ್ನು ಕೇಳಿ ತಲೆ ತಿನ್ನುತ್ತಿದ್ದರು. 'ನೀನು ಯಾರು? ಎಲ್ಲಿಗೆ ಹೋಬೇಕು? ಅಲ್ಲ್ಯಾಕೆ ಹೋಗಬೇಕು? ಮದುವೆಯಾಗಿದೆಯೇ, ಗರ್ಲ್‌ಫ್ರೆಂಡ್ ಇದ್ದಾಳೆಯೇ? ಅವಳ ಹೆಸರೇನು? ನಿನ್ನ ವಯಸ್ಸೆಷ್ಟು?' ಇತ್ಯಾದಿ... ಕೇಳಿ ರೇಜಿಗೆ ಹುಟ್ಟಿಸುತ್ತಿದ್ದರು.

'ಸಾರಿ ಗುರುವೇ, ನೀನು ಏನು ಮಾಡುತ್ತೀಯಾ ಅಂತ ಹಾಗೇ ಕೇಳಿದೆ. ಬೇಜಾರು ಮಾಡ್ಕೋ ಬೇಡ. ನಾನೊಬ್ಬ ಲೇಖಕ. ಲೇಖಕರಿಗೆ ಸ್ವಲ್ಪ ಕುತೂಹಲ ಜಾಸ್ತಿಯಲ್ಲವೇ? ಅಷ್ಟೇ...'

'ಓಹೋ, ಹಾಗಾದ್ರೆ ನೀನೊಬ್ಬ ಲೇಖಕ!'